ಇ) ಈ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಹೆಚ್ಚಿಸುವ ಬಗ್ಗೆ ಶೀಘ್ರದಲ್ಲಿಯೇ ಅಂತಿಮ ತೀರ್ಮಾನಕ್ಕೆಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ತಾಂತ್ರಿಕ ಮಹಾ ವಿದ್ಯಾಲಯಗಳಿಗೆ ಸೇರಲು ವರಮಾನ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವಲ್ಲಿ ಇರುವ ಗೊಂದಲದ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಯು. ಬಿ.ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ೧೯೮೮ರಿಂದ ೧೯೯೭ರವರೆಗೆ ಹಿರೇಕೆರೂರು ಪಟ್ಟಣದಲ್ಲಿ ಅಂಜುಮಾನ್ ಇಸ್ಲಾಂ ಕಮಿಟಿಗೆ ಸಂಬಂಧಿಸಿದಂತೆ ಜಮಾ ಖರ್ಚಿನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಹಾಗೂ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮತಿಘಟ್ಟದ ಶ್ರೀ ಜಯಭಾರತಿ ವಿದ್ಯಾಪೀಠ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರ ಹುದ್ದೆಗೆ ಅನುಮೋದನೆ ನೀಡುವ ಬಗೆಗಿನ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಸಾಬ್ರಕಟ್ಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವ ಡಾ. ಕೆ. ಗಂಗಾಧರ ನಂಬಿಯಾರ್‌ಇವರ ಹುದ್ದೆಗೆ ವೇತನ ನಿಗದಿಪಡಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಬೇಕಾದ ೧೨ ಜನರ ಪೈಕಿ ೮ ಜನರು ಗೈರು ಹಾಜರಾಗಿದ್ದಾರೆ. ಅವರು ತಮ್ಮ ಗೈರು ಹಾಜರಿಗೆ ಕಾರಣವನ್ನೂ ಕೂಡ ನನಗೆ ತಿಳಿಸಿಲ್ಲ ಮತ್ತು ಅರ್ಜಿಗಳನ್ನು ಮಂಡಿಸಬೇಕೆಂದೂ ಸಹ ನನಗೆ ಹೇಳಿಲ್ಲ. ಈಗ ಶೂನ್ಯ ವೇಳೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : (ಅ) ಬೆಂಗಳೂರಿನ ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳು ಭಾಷೆ ಬಲ್ಲವರನ್ನು ಮರು ನೇಮಕಾತಿ ಮಾಡಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ನಿನ್ನೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳರನ್ನು ನೇಮಕ ಮಾಡಿರುವ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ದೊಡ್ಡ ಹೋರಾಟ ನಡೆದಾಗ ಕೇಂದ್ರ ಸರ್ಕಾರವನ್ನು ನೇಮಕಾತಿ ಆದೇಶವನ್ನು ಹಿಂದಕ್ಕೆ ಪಡೆದಿತ್ತು. ಆದರೆ ಈಗ ಮತ್ತೊಮ್ಮೆ ಅದೇ ನೌಕರರನ್ನು ಆ ಕಛೇರಿಗೆ ಪುನ: ನೇಮಕಾತಿ ಮಾಡಲಾಗಿದೆ ಎಂದು ಮಾನ್ಯ ಪ್ರಧಾನ ಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಕರುಣಾನಿಧಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಇದರಿಂದಾಗಿ ಬಹಳ ಗಂಭೀರವಾದಂತಹ ಪರಿಸ್ಥಿತಿ ಉದ್ಭವವಾಗುತ್ತಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ

ಪಡಿಸಬೇಕು. ಅವರು ನಮ್ಮ ರಕ್ಷಣೆ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಳ್ಳಬೇಕು. ಈ ರೀತಿ ಮಾನ್ಯ ಪ್ರಧಾನ ಮಂತ್ರಿಗಳು ಪತ್ರ ಬರೆದಿದ್ದು ನಿಜವಾಗಿದ್ದಲ್ಲಿ, ಪುನ: ಅದೇ ಕಛೇರಿಗೆ ನೇಮಕ ಮಾಡಿರುವುದು ನಿಜವಾಗಿದ್ದಲ್ಲಿ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸರ್ವಪಕ್ಷಗಳ ನಿಯೋಗ ಈ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಬೇಕು. ಈ ಕೇಂದ್ರದ ನೀತಿ ಸರಿಯಲ್ಲ. ಇದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ ಎನ್ನುವ ವಿಚಾರವನ್ನು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು : ನಾನು ಈಗಾಗಲೇ ಆ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರೂ ಕೂಡ ಈ ಬಗ್ಗೆ ಹೇಳಿಕೆ ನೀಡಲು ಸಿದ್ಧರಿದ್ದಾರೆ. ಶೂನ್ಯ ವೇಳೆಯಲ್ಲಿ ಕೆಲವೊಂದು ಪ್ರಸ್ತಾವನೆಗಳು ಇವೆ. ಅವುಗಳನ್ನು ಮುಗಿಸಿದ ನಂತರ ತಾವು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸುತ್ತೇನೆ.

(ಆ) ಗುಳೇದಗುಡ್ಡ ಕ್ಷೇತ್ರದ ಹುನಗುಂದ ತಾಲ್ಲೂಕಿನ ಗುಡೂರು ಗ್ರಾಮದಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜು

+ ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಹುನಗುಂದ ತಾಲ್ಲೂಕಿನಲ್ಲಿ ಬರತಕ್ಕಂಥ ಗುಡೂರು ಗ್ರಾಮದಲ್ಲಿ ವಿದ್ಯುತ್ತಿನ ಅಸಮರ್ಪಕ ಪೂರೈಕೆ ಕುರಿರು ಅಲ್ಲಿಯ ಜನ ದಿನಾಂಕ ೯.೩.೯೯ರಿಂದ ಸತ್ಯಾಗ್ರಹ ನಿರತರಾಗಿದ್ದಾರೆ. ಮೊನ್ನೆ ಶನಿವಾರ ದಿನಾಂಕ ೧೩.೩.೯೯ರಂದು ಅವರಿಗೆ ಸಮಾಧಾನ ಹೇಳಿ ಅವರ ಸಮಸ್ಯೆಗಳನ್ನು ಈಡೇರಿಸುವ ಭರವಸೆಯನ್ನು ಕೊಟ್ಟು ಅವರ ಸತ್ಯಾಗ್ರಹವನ್ನು ಮುಕ್ತಾಯ ಗೊಳಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಅಲ್ಲಿಯ ಎಇಇ ಹಾಗೂ ಸೆಕ್ಷನ್ ಆಫೀಸರ್‌ಗೂ ಕೂಡ ಅವರನ್ನು ಭೇಟಿಯಾಗುತ್ತೇನೆಂದು ಮೊದಲೇ ಸಂದೇಶ ತಿಳಿಸಿ ನಾನು ಹೋದೆ. ಅವತ್ತಿನ ದಿವಸ ಅವರಿಬ್ಬರೂ ತಾವು ಮುಂದೆ ಹೋಗಿರಿ, ನಾವಿಬ್ಬರೂ ತಮ್ಮ ಹಿಂದೆಯೇ ಬರುತ್ತೇನೆ ಎಂದು ನನಗೆ ಹೇಳಿದರು. ಆದರೆ ನಾನು ಅಲ್ಲಿಗೆ ಹೋದ ಮೇಲೆ ಕೂಜ ಅವರು ಅಲ್ಲಿಗೆ ಬರಲಿಲ್ಲ. ಸಾಯಂಕಾಲ ೬ ಗಂಟಿಗ ಸುಮಾರಿಗೆ ನಾನು ಅಲ್ಲಿಗೆ ಹೋದೆ. ರಾತ್ರಿ ೯.೩೦ ಗಂಟೆಯವರೆಗೂ ಕೂಡ ಅವರು ಈ ಸ್ಥಳಕ್ಕೆ ಬರಲೇ ಇಲ್ಲ. ಕೆಇಬಿಯ ಅಧಿಕಾರಿಗಳು ಅಲ್ಲಿಗೆ ಬರದಿದ್ದುದರಿಂದ ಅಲ್ಲಿನ ಜನ ಸಿಟ್ಟಿಗೆದ್ದರು. ಶಾಸಕರಾದ ತಮಗೇ ಆ ಅಧಿಕಾರಿಗಳು ಮರ್ಯಾದೆ ಕೊಡಲಿಲ್ಲವೆಂದ ಮೇಲೆ ನಮಗಂತೂ ಅವರು ಕೇಳುವುದು ಇಲ್ಲ ಎಂದು ಜನರು ಹೇಳಿ ತಾವು ತಮ್ಮ ಸ್ಪೈಕ್ ಅನ್ನು ಇನ್ನೂ ಜೋರಾಗಿಯೇ ನಡೆಯುವುದಾಗಿ ಹೇಳಿದರು. ಅಲ್ಲಿ ೫-೧೦ ನಿಮಿಷಗಳಿಗೊಮ್ಮೆ ಕರೆಂಟ್ ಹೋಗುವುದನ್ನು ನಾನೇ ಖುದ್ದಾಗಿ ರಾತ್ರಿ ೯.೩೦ ಗಂಟೆಯವರೆಗೂ ಕೂಡ ಅಲ್ಲೇ ಕುಳಿತುಕೊಂಡು ನೋಡಿದ್ದೇನೆ. ಆದರೆ ಇಲ್ಲಿಯವರೆಗೂ ಇಲ್ಲಿಯ ಸಮಸ್ಯೆಗೆ ಕೆಇಬಿ ಯವರು ಸರಿಯಾದ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇದರಿಂದಾಗಿ ಇಲ್ಲಿ ಬಹಳಷ್ಟು ತೊಂದರೆಯಾಗಿದೆ. ಈ ವರ್ಷ ಬೋರೆವೆಲ್‌ನಲ್ಲಿ ಅಂತರ್ಜಲ ಜಾಸ್ತಿಯಾಗಿ ನೀರೂ ಕೂಡ ಜಾಸ್ತಿಯಾಗಿದೆ. ಮಳೆಗಾಲದಲ್ಲಿ ಅತಿ ಮಳೆಯಾಗಿ ಪೀಕುಗಳೆಲ್ಲಾ ಹಾಳಾಗಿ ಹೋಗಿವೆ. ಈಗ ಕರೆಂಟ್ ಸ್ವಲ್ಪ ಚೆನ್ನಾಗಿ ಬಂದರೆ ಅವರು